**ದಿನಾಂಕಃ 02.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು– ಪ್ರತಿವಾದಿ ಪರ ಶ್ರೀ.ಎಸ್.ಎಸ್.ಎಚ್ ವಕೀಲರಿಂದ–**

ನನಗೆ ಸಂಗಮ್ಮ ಎಂತಲೂ ಕರೆಯುತ್ತಾರೆ. ನನ್ನ ಗಂಡನ ಹೆಸರು ಚನ್ನಬಸಪ್ಪ. ನನ್ನ ಗಂಡನ ಮೊದಲನೇ ಹೆಂಡತಿಯ ಹೆಸರು ಸಾವಿತ್ರಿ. ಅವರು ಮೃತಪಟ್ಟಿದ್ದಾರೆ. ನಾನು ನನ್ನ ಗಂಡನಿಗೆ 6 ನೇ ಹೆಂಡತಿ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ನಾನು ಪ್ರತಿವಾದಿಯ ವಿರುದ್ಧ ಘೋಷಣೆ ಮತ್ತು ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿರುತ್ತೇನೆ.

ನಾನು ಶಾಲೆ ಕಲಿತಿರುವದಿಲ್ಲ. ನಾನು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನನಗೆ ಆಂಗ್ಲ ಭಾಷೆ ತಿಳಿಯುವುದಿಲ್ಲ. ಕನ್ನಡ ಭಾಷೆ ತಿಳಿಯುತ್ತದೆ. ದಾವಾ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತು. ಅದು 306/1 ಇದೆ. ಸದರಿ ಜಮೀನು ಮೂಲತಃ ನನ್ನ ಗಂಡನಾದ ಚನ್ನಬಸಪ್ಪರವರದಾಗಿರುತ್ತದೆ. ಸದರಿ ಜಮೀನನ್ನು ನನ್ನ ಗಂಡ 2021 ನೇ ಸಾಲಿನಲ್ಲಿ ನನ್ನ ಹೆಸರಿಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿ. ಫೆಬ್ರುವರಿ 2022 ರಲ್ಲಿ ನನ್ನ ಕುಟುಂಬದ ಅವಶ್ಯಕತೆಗೋಸ್ಕರ ಮಾರಾಟಕ್ಕೆ ಹಚ್ಚಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪ್ರತಿವಾದಿ ರೂ. 5,51,000/– ಬೇಡಿದ್ದು, ಅದು ನನಗೆ ಯೋಗ್ಯ ಬೆಲೆ ಅನಿಸಿದ್ದರಿಂದ ಮಾರಾಟ ಮಾಡಲು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಅದರಂತೆ ನಾನು ದಿ. 15.03.2022 ರಂದು ಪ್ರತಿವಾದಿಯಿಂದ ರೂ. 5,51,000/– ಪಡೆದುಕೊಂಡು ಸಾಕ್ಷಿದಾರರ ಸಮಕ್ಷಮ ನೋಂದಾಯಿ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ನನ್ನ ಗಂಡ ಮತ್ತು ಅವನ ಮೊದಲನೇ ಹೆಂಡತಿಯ ಮಕ್ಕಳಾದ ಕಿಶೋರ ಮತ್ತು ಕಿರಣರವರು ತಮ್ಮ ಸಂಪೂರ್ಣ ಒಪ್ಪಿಗೆ ಇದೆ

ಎಂದು ಸಾಕ್ಷಿದಾರರ ಜೊತೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ರೂ. 5,51,000/- ಮಾರಾಟ ಮಾಡಿದ್ದರೂ ಸಹ ಸುಳ್ಳು ಸಂಗತಿಗಳ ಆಧಾರದ ಮೇಲೆ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಆಧಾರ ಕಾರ್ಡ ನಂಬರ್ 6029 6013 4144 ಆಗಿರುತ್ತದೆ ಎಂದರೆ ಸರಿಯಲ್ಲ. ನೋಂದಣಿ ಕಾಲಕ್ಕೆ ನನ್ನ ಮತ್ತು ಎದುರುದಾರರ ಪೋಟೋ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಖರೀದಿ ಪತ್ರದಲ್ಲಿರುವ ಪೋಟೋವನ್ನು ತೋರಿಸಲಾಗಿ ಅದು ತನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಖರೀದಿ ಪತ್ರದಲ್ಲಿರುವ ಪೋಟೋವನ್ನು ತೋರಿಸಲಾಗಿ ಅದು ಆಕೆಯ ಗಂಡ ಚನ್ನಬಸಪ್ಪನದು ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಖರೀದಿ ಪತ್ರದಲ್ಲಿರುವ ಪೋಟೋಗಳನ್ನು ತೋರಿಸಲಾಗಿ ಅದರಲ್ಲಿರುವ ಪೋಟೋ ನನ್ನ ಗಂಡನ ಮೊದಲನೇ ಹೆಂಡತಿಯ ಮಕ್ಕಳಾದ ಕಿರಣ ಮತ್ತು ಕಿಶೋರದಾಗಿದೆ ಎಂದರೆ ಸರಿಯಲ್ಲ. ಖರೀದಿ ಪತ್ರಕ್ಕೆ ನಾನು ನನ್ನ ಹೆಬ್ಬಟ್ಟಿನ ಗುರುತು ಹಾಕಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಆಧಾರದ ಮೇಲೆ ಪ್ರತಿವಾದಿಯು ಕಂದಾಯದಾಖಲೆಗಳಲ್ಲಿ ತನ್ನ ಹೆಸರು ನಮೂದಿಸುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

ಪ್ರತಿವಾದಿಯ ಹೆಸರು ದಾಖಲು ಮಾಡಬಾರದು ಎಂದು ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ತಹಸೀಲ್ದಾರರವರು ಅದನ್ನು ಆರ್.ಟಿ.ಎಸ್ ಪ್ರಕರಣ ಎಂದು ದಾಖಲು ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಆರ್.ಟಿ.ಎಸ್. ಪ್ರಕರಣದಲ್ಲಿ ನಾನು ಹಾಜರಾಗಿದ್ದೇನೆ ಎಂದರೆ ಸರಿಯಲ್ಲ. ತಹಸೀಲ್ದಾರವರು ನಮ್ಮ ತಕರಾರನ್ನು ತಳ್ಳಿ ಹಾಕಿ

ಪ್ರತಿವಾದಿಯ ಹೆಸರು ಕಂದಾಯ ದಾಖಲೆಗಳನ್ನು ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನ ಮತ್ತು ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ. ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಯ ಹೆಸರು ನಮೂದಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸಾಗುವಳಿ ನಾನೆ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೋಂದಾಯಿತ ಖರೀದಿ ಪತ್ರ ಕಾನೂನು ಬದ್ಧವಾಗಿದ್ದು, ಅದು ನನಗೆ ಕಾನೂನು ಪ್ರಕಾರ ಬಂಧನಕಾರಕವಾಗಿದೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಖರೀದಿ ಪತ್ರವು ಖೊಟ್ಟಿಯಾಗಿದ್ದು, ಅದನ್ನು ರದ್ದು ಪಡಿಸಬೇಕೆಂದು ಮಾಗಣಿ ಮಾಡಿರುವದಿಲ್ಲ ಎಂದರೆ ಸರಿ. ನಿಜ ಸಂಗತಿಗಳನ್ನು ಮರೆಮಾಚಿ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ತೊಂದರೆ ನೀಡಿದ್ದರಿಂದ ಅವರಿಗೆ ಪರಿಹಾರದ ಖರ್ಚು ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ.

ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಗಿರುವದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಮೋಸ ಮಾಡಿ ಖೊಟ್ಟಿ ಖರೀದಿ ಪತ್ರ ಮಾಡಿಕೊಂಡಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಬ್ಯಾಂಕ ಸಾಲ ಕೊಡಿಸುತ್ತೇನೆ ಎಂದು ಕರೆದುಕೊಂಡು ಹೋಗಿ ಒತ್ತಾಯಪೂರ್ವಕವಾಗಿ ಖೊಟ್ಟಿ ಖರೀದಿ ಪತ್ರ ಮಾಡಿಕೊಂಡಿದ್ದಾನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ